- -                                   ಸಿ.ಸಿ. ನಂ. 2123/2025

ಪಿ. ಡಬ್ಲ್ಯೂ: 1

( ಇಂದು ದಿಃ 15 /12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಟಿ ಎನ್ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ಥೆಯಲ್ಲಿ ಕಳೆದ 8 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮ ಬ್ಯಾಂಕು ಕಾನೂನಿನಡಿಯಲ್ಲಿ ನೊಂದಣಿ ಆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಮ್ಮ ಸಂಸ್ಥೆ ನಿರ್ದೇಶಕರ ಮಂಡಳಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಪ್ರಕರಣ ನಡೆಸಲು ನನಗೆ ನಿರ್ದೇಶಕರ ಮಂಡಳಿಯವರು ಅಧಿಕಾರ ಪತ್ರವನ್ನು ನೀಡಿದ್ದು ಇರುತ್ತದೆ. ಸದರಿ ಅಧಿಕಾರ ಪತ್ರವನ್ನು / ಠರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸಬಹುದು. ಆರೋಪಿಗೆ ಜಾಮಿನು ಸಾಲವನ್ನು ನೀಡಿರುತ್ತೇವೆ. ರೂ. 10,000 ಶೇರಿನ ಮೊತ್ತ ಹಾಗೂ ರೂ. 20,000 ಅನ್ನು ಎಫ್ ಡಿ ಯನ್ನು ನಮ್ಮ ಬಳಿ ಇಟ್ಟುಕೊಳ್ಳಲಾಗಿದೆ. ಆರೋಪಿಗೆ ರೂ. 2,00,000 ಸಾಲವನ್ನು ನೀಡಿರುತ್ತೇವೆ. ಸಾಲ ಕಟ್ಟು ಬಾಕಿ ಆದಾಗ ನೊಟೀಸನ್ನು ಜಾಮೀನುದಾರರಿಗೆ ನೀಡಿದ್ದು ಇರುತ್ತದೆ. ಅರೋಪಿಯು ಯಾವುದೇ ಕಂತನ್ನು ತುಂಬಿಲ್ಲಾ. ಚೆಕ್ಕಿನ ಮೇಲೆ ಇರುವ ಬರವಣಿಗೆ ಮತ್ತು ಸಹಿಯಲ್ಲಿ ಶಾಹಿಯ ವ್ಯತ್ಯಾಸ ಕಂಡುಬರುತ್ತಿದೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯಲ್ಲಿ ಮ್ಯಾನುಎಲ್ ಲೆಗ್ಜರ್ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸಬಹುದು. ಆರೋಾಪಿ ಇದೆ ಮೊದಲ ಬಾರಿ ನಮ್ಮ ಸಂಸ್ಥೆಯಲ್ಲಿ ಸಾಲವನ್ನು ಪಡೆದಿರುತ್ತಾರೆ. ಆರೋಪಿ ಸಂಪೂರ್ಣ ಮೊತ್ತವನ್ನು ಜಮೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯಿಂದ ಸಾಲದ ದಾಖಲೆಯಾಗಿ ಚೆಕ್ಕನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸಾಲ ಮರುಪಾವತಿ ಆದ ನಂತರ ಶೇರು ಹಾಗೂ ಎಫ್ ಡಿ ಮೊತ್ತ ಆರೋಪಿ ಕೇಳಿದ್ದರಿಂದ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ರಿಂದ 12 ದಾಖಲೆಗಳನ್ನು ಸದರಿ ಪ್ರಕರಣಕ್ಕೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿರ್ದೇಶಕ ಮಂಡಳಿಯವರು ನನಗೆ ಯಾವುದೇ ಅಧಿಕಾರವನ್ನು ನೀಡಿದ್ದೇ ಇಲ್ಲಾ ಎಂದರೆ ಸರಿಯಲ್ಲ. ಆರೋಪಿ ನಮಗೆ ಯಾವುದೇ ಮೊತ್ತ ನೀಡಲು ಬಾಕಿ ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ.ಕೇ. ಸರಿ ಇದೆ

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ